Regd No M 1299 34 th Year ಕಾ॥ 30—6—51

SATYAVADI




ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

# ಕೋಮುವಾರು ಭಾವನೆಯೇ ಕಾಗೋಡು ಚಳುವಳಿ ಕಾರಣ

## ಶ್ರೀ ಚನ್ನಬಸಪ್ಪನವರ ಪತ್ರಿಕಾ ಸಂಮೇಳನ

ಮೈಸೂರು — ಕೋಮುವಾರು ಭಾವನೆಯೇ ಕಾಗೋಡು ಚಳುವಳಿಯು ಅಂತರ್ಯ — ಹೀಗೆಂದು ಮೈಸೂರು ಜಿಲ್ಲಾಬೋರ್ಡು ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಈ ಬೆಳಿಗ್ಗೆ ಪತ್ರಿಕಾ ಪರಿಷತ್ತಿನಲ್ಲಿ ತಿಳಿಸಿದರು ದೀವಂರೆಂಬ ಜನ ಅಲ್ಲಿನವರು ಅವರ ಸಂಖ್ಯೆಯೇ ಹೆಚ್ಚು. ಹಿಡುವಳಿದಾರರ ಸಂಖ್ಯೆ ಕಡಿಮೆ. ಭೂಮಾಲಿಕತನವನ್ನೆ ನಿಮಗೆ ಒದಗಿಸುವದಾಗಿ ರೈತರನ್ನು ಚಿತಾವಣೆ ಮಾಡಿ ಚಳುವಳಿಯನ್ನು ಎಬ್ಬಿಸಲಾಯಿತು ಎಂದು ಅವರು ತಿಳಿಸಿದರು. ಈ ವಿಷಯ ತಿಳಿಯದೆ ಕಡಿದಾಳ್ ಮಂಜಪ್ಪನವರು ಕೂಡ ದಾರಿ ತಪ್ಪಿದುದಾಗಿ ಅವರು ತಿಳಿಸಿದರು.

ಅಲ್ಲಿ ಎಕರೆಗೆ ತಲಾ ಒಂದೂವರೆ ಪಲ್ಲದಿಂದ ಎಂಡು ಪಲ್ಲದವರಿಗೆ ಹಿಡುವಳಿದಾರರಿಗೆ ಗತ್ತಿಗೆ ಕೊಡಲಾಗುತ್ತಿದೆ ಗೇಣಿ ವಿಷಯದಲ್ಲಿ ಈ ಚಳುವಳಿ ನಡೆದಿಲ್ಲ ಎಂದನರು ತಿಳಿಸಿದರು.

ಕಾಗೋಡಿನಲ್ಲಿನ ದೌರ್ಜನ್ಯ ಕುರಿತು ಸೋಷಲಿಸ್ಟರು ರಾಜಕೀಯ ಶೋಷಣೆಗೆ ಕೈಹಚ್ಚಿದ್ದಾರೆ. ಅವರು ಕಾನೂನು ಸುಭಂಗಕ್ಕೆಳಿದುದು ಸರಿಯಲ್ಲ. ಜನರ ವಿಶ್ವಾಸಗಳಿಸಿ ಕೆಲಸ ಮಾಡಬೇಕು ಡಾ ಲೋಹಿಯ ಅಂತಹವರು ಏಕಾಏಕಿ ದುಡುಕಿದುದು ಸರಿಯಲ್ಲ ಎಂದು ಅವರು ತಿಳಿಸಿದರು

ಭಾರತ ರಾಜ್ಯಾಂಗ ಪ್ರಕಾರ ವ್ಯಕ್ತಿಗೆ ಸ್ವತ್ತು ಹೊಂದಿರುವ ಅವಕಾಶವಿದೆ ಸರಕಾರ ಅದನ್ನು ಕಿತ್ತಿಕೊದ್ದರೆ ಅದು ಸರಕಾರವೇ ಅಲ್ಲ — ಎಂದು ಶ್ರೀ ಚನ್ನಬಸಪ್ಪನವರು ತಿಳಿಸಿದರು

## ಜಿಲ್ಲಾ ಬೋರ್ಡು ಸಭೆ

ಮೈಸೂರು — ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾಬೋರ್ಡು ಸಭೆ ನಿನ್ನೆ ದಿವಸ ಸಮಾವೇಶಗೊಂಡಿದ್ದಿತು

ಬೊಂಬಾಯಿನ ಡೆಕ್ಕನ್ ಎಜುಕೇಷನ್ ಮಾದರಿಯಲ್ಲಿ ಮೈಸೂರು ಜಿಲ್ಲಾ ವಿದ್ಯಾಪ್ರಚಾರ ಸಮಿತಿ ನೇಮಿಸಿ ವಿಚಾರಣೆಗೆ ಸರ್ಕಾರದ ಸಲಹೆ ಕೇಳುವ ನಿರ್ಣಯ ಅಂಗೀಕೃತವಾಯಿತು.

ಮೈಸೂರಿನಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ರೂ 500 ಕೊಡುವ ತೀರ್ಮಾನವಾಯಿತು.

ರಾಮಂದೂರ್, ನಂಜನಗೂಡು ಹುಂಡಿಪುರ ಮತ್ತು ಬೆಟ್ಟದಪುರದಲ್ಲಿ ಡಾಕ್ಟರ್ ಕ್ವಾರ್ಟರ್ಸ್ ನಿರ್ಮಿಸುವ ನಿರ್ಣಯವಾಯಿತು.

## ಮಂತ್ರಿಗಳ ವಿಮಾನ ಸಂಚಾರ

### ಆಡಿಟರ್ ಜನರಲ್ಲರ ಕಟು ಟೀಕೆ

ಹೊಸದೆಹಲಿ.... ವಿಶೇಷವಾಗಿ ಸರಕಾರದಿಂದ ಒದಗಿಸಲ್ಪಟ್ಟ ವಿಮಾನದಲ್ಲಿ ವಿಮಾನದಲ್ಲಿ ಕಾರ್ಯನಿರ್ವಹಣೆ ಹೋಗುವಾಗ್ಗೆ ತಮ್ಮೊಂದಿಗೆ ತಮ್ಮ ಮಿತ್ರರನ್ನೂ ಬಂಧುಗಳನ್ನೂ ಕರೆದುಕೊಂಡುಹೋಗುವ ಕೆಲವೊಂದು ಕೇಂದ್ರ ಮಂತ್ರಿಗಳ ನಡುವಳಿಕೆಯ ಬಗ್ಗೆ ಆಡಿಟರ್ ಜನರಲ್ಲರ್ರು ಕಟುವಾಗಿ ಟೀಕಿಸಿದ್ದಾರೆ ; ಈ ರೀತಿಯಿಂದ ಸರಕಾರಕ್ಕೆ 50 ಸಾವಿರ ರೂ. ಗಳಿಗೆ ಮೇಲ್ಪಟ್ಟು ಹಾನಿ ತಟ್ಟಿದೆ ಎಂದಿರುವರು.

o o

# ಕಾಶ್ಮೀರ ಧಾಳಿಗೆ ಪಾಕ್ ಸಿದ್ಧತೆ

## ಜಮ್ಮುವಿನಲ್ಲಿ ಗ್ರಹಂ ವಿರುದ್ಧ ಪ್ರದರ್ಶನ

**ದಿವ್ಯ ಪಾಣಿ**

ಗ್ರಂಥಗಳ ಸಂಗ್ರಹವೊಂದೇ ಈ ದಿನದ ವಿದ್ಯಾ ಪೀಠ — ಕಾರ್ಲೈಲ್

## ಪೌರಸಭೆ ಅಧಿವೇಶನ

ಮೈಸೂರು — ಶ್ರೀ ಟಿ. ನರಸಿಂಹ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ಸಮಾವೇಶವಾಗಿದ್ದಿತು.

ಮ್ಯಾನೇಜಿಂಗ್ ಕಮಿಟಿ, ವರ್ಕ್ಸ್ ಕಮಿಟಿ, ಹೆಲ್ತ್ ಕಮಿಟಿ ಟವರ್‌ಹಾಲ್ ಕಮಿಟಿ, ಆಡಿಟ್ ಕಮಿಟಿ ವತ್ತು ಲೀಗಲ್ ಕಮಿಟಿ ಇವುಗಳು ಪುನರ್ರಚಿತವಾದವು

— ನಿರ್ಣಯಗಳು —

ಬಹಳ ಕಾಲದಿಂದಲೂ ಹಾಗೇ ನಿಂತಿರುವ ತಾ| 23-3-49 ರಲ್ಲಾದ ಮೈಸೂರು ಪೌರಸಭೆಯು 821 ನೇ ನಂಬರಿನ ನಿರ್ಣಯದಂತೆ ಬಿಲ್ಲೇ ಮೊಹಲ್ಲದಲ್ಲಿರುವ ತೋಟದ ಪ್ರದೇಶವನ್ನು ಕೂಡಲೇ ವಶಕ್ಕೆ ತೆಗೆದುಕೊಳ್ಳಲು ಮೈಸೂರು ನಗರಾಭಿವೃದ್ಧಿ ಸಮಿತಿಗೆ ಸರ್ಕಾರ ತಿಳಿಸಬೇಕೆಂದು ಕೋರುವ ನಿರ್ಣಯವನ್ನು ಶ್ರೀ ಕೃಷ್ಣಮೂರ್ತಿರಾಯರು ಮಂಡಿಸಿದರು ಶ್ರೀ ಎ. ವೆಂಕಟೇಶಯ್ಯನವರು ' ಲ್ಯಾಂಡ್ ಅಕ್ವಿಸಿಷನ್ ಆಕ್ಟ್ 17 ನೇ ನಿಯಮದಂತೆ ನಶಸಡಿಸಿಕೊಳ್ಳಬೇಕು ' ಎಂದು ತಿದ್ದುಪಡಿ ಸೂಚಿಸಿದರು. ತಿದ್ದುಪಡಿ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

' ಗೋಹತ್ಯೆ ನಿರೋಧ ಶಾಸನ ಬಗ್ಗೆ ಉತ್ತಮಫಲ ಹೊಂದಲು, ಹೊರಗಿನಿಂದ ಗೋಮಾಂಸ ಮೈಸೂರು ನಗರಕ್ಕೆ ಆಮದು ಆಗುವದನ್ನು ತಪ್ಪಿಸಲು ಮತ್ತು ನಗರದಲ್ಲಿ ಗೋಮಾಂಸ ಮಾರಾಟ ಮಾಡುವದನ್ನು ನಿಲ್ಲಿಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಸಭೆ ನಿರ್ಣಯಿಸುತ್ತದೆ — ಎಂಬ ನಿರ್ಣಯವನ್ನು ಡಾ|| ಬಿ ಡಿ. ದಾಸ್ ರವರು ಮಂಡಿಸಿದರು

ಡಾ|| ದಾಸ್‌ರವರು ನಿರ್ಣಯವನ್ನು ಮಂಡಿಸುತ್ತಾ — ಈ ರೀತಿ ಗೋಮಾಂಸ ಮಾಡುವುದರಿಂದ ಅಕ್ರಮವಾಗಿ ಗೋವಧೆ ನಡೆದು ಮಾಂಸ ಮಾರಾಟ ಸಾಧ್ಯವಾಗುತ್ತದೆ ಎಂದು ತಿಳಿಸಿ ನಿರ್ಣಯಕ್ಕೆ ಸರ್ವರ ಬೆಂಬಲ ಕೋರಿದರು. ಶ್ರೀ ಎ. ವೆಂಕಟೇಶಯ್ಯನವರು ನಿರ್ಣಯವನ್ನು

### ದುರ್ವರ್ತನೆ ಮಾಡಿದ ವಿದ್ಯಾರ್ಥಿಗಳಿಗೆ ೧೦೦ ರೂ. ಜುಲ್ಮಾನೆ

ಹುಬ್ಬಳ್ಳಿ — ಧಾರವಾಡದಲ್ಲಿ ಮ್ಯಾಟ್ರಿಕ್ ವರ್ಗದಲ್ಲಿರುವ ನೀಲಕಂಠಗೌಡ ಮತ್ತು ವೀರನಗೌಡ ಎಂಬವರು ಇಲ್ಲಿಯ ಬಸವೇಶ್ವರ ಥಿಯೇಟರಿನಲ್ಲಿ ನಾಟಕ ನೋಡಲು ಬಂದಾಗ್ಗೆ ನಟಿಯರನ್ನು ನೋಡಿ ಅವಾಚ್ಯ ಶಬ್ದಗಳನ್ನು ಉಚ್ಚರಿಸಿ ಸಾರ್ವಜನಿಕ ಸ್ಥಳದಲ್ಲಿ ದುರ್ವರ್ತನೆ ಮಾಡಿದ ಒಗ್ಗೆ ವತ್ತು ಬೀಡಿ ಸೇದಿ ಒಗ್ಗೆ ವಿಚಾರಣೆಗೊಳಪಡಿಸಲ್ಪಟ್ಟು ತಲೆ 100 ರೂ. ಜುಲ್ಮಾನೆ ವಿಧಿಸಲಾಯಿತು.

### ದೂರ ದೇಶದ ಅಕ್ಕಿ – ಗೋಧಿ

ಮುದಂತಾರು.... 9050 ಟನ್ ಅಮೆರಿಕಾ ಗೋಧಿ ಭಾನುವಾರ ಕೊಚ್ಚಿನ್ ಹಾರ್ಬರಿಗೆ ಬಂದಿತು : ಅದೇ ಬಂದರಿಗೆ ಥೈಲಾಂಡಿನ 7475 ಟನ್ ಅಕ್ಕಿ ಸಹ

### ಮಹಾಸಭೆ ತಿದ್ದುಪಡಿಗೆ ನಕಾರ

ನವದೆಹಲಿ.... ಅಖಿಲ ಭಾರತ ಮಹಾಸಭೆಯು ಕಾರ್ಯಕಾರಣಾಜ್ಯಾಂಗದ ತಿದ್ದುಪಡಿಯನ್ನು ಅಧಿಸಿ ನಿರ್ಣಯ ಮಾಡಿದೆ

---

ಅನುಮೋದಿಸಿದರು.

ಶ್ರೀ ಅಬ್ದುಲ್ ರಹಮಾನರು ಕ್ರಿಯಾಲೋಪವೆತ್ತಿ ನಿರ್ಣಯ ಕ್ರಮಬದ್ಧವಲ್ಲವೆಂದರು. ಅಧ್ಯಕ್ಷರು ಕ್ರಿಯಾಲೋಪವನ್ನು ಅಂಗೀಕರಿಸಿ ನಿರ್ಣಯವನ್ನು ತಿರಸ್ಕರಿಸಿದರು.

---

ಮೊನ್ನೆ ಸಂಜೆ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಶಿವಮೊಗ್ಗದಲ್ಲಿ ಭಾಷಣ ಮಾಡುತ್ತಾ ಕಾಗೋಡು ಸತ್ಯಾಗ್ರಹದ ಬಗ್ಗೆ ಭಾಷಣ ಮಾಡುತ್ತಾ ಸೋಷಲಿಸ್ಟ ಟೀಕಿಸಿದಾಗ ಗಲಭೆ ನಡೆದು ಹಲವು ಗಾಯಗಳಾಗಿವೆ

7 ನೂರು ಮೈಲಿ ಸಮರ ಸಮಾಪ್ತ

ಕಾಶ್ಮೀರ ಜಮ್ಮು ಗಡಿಯಲ್ಲಿ ಧಾಳಿನಡಿಸಲು ಪಾಕ್ ಸಿದ್ಧವಾಗುತ್ತಿರುವ ನರದಿ ಇದೆ ಕಾಶ್ಮೀರ ಘಟನಾ ಸಭೆಯಿಂದ ಜನಮನ ಸೆಳೆಯಲು ಕಾಶ್ಮೀರದಲ್ಲಿ ಭೀತಿ ಹುಟ್ಟಿಸಲು ಪಾಕ್ ಪ್ರಯತ್ನಿಸುತ್ತಿದೆ.

ಗ್ರಹಾಂರೆ ವಾಪಸು ಹೋಗಿ ಮಾಂದು ಜಮ್ಮು ವಿದ್ಯಾರ್ಥಿಗಳು ಮೊನ್ನೆ ವಿಶ್ವಸಂಸ್ಥೆ ವೀಕ್ಷಕರ ಮುಂದೆ ಪ್ರದರ್ಶನ ಮಾಡಿದರು

## ಶ್ರೀ ತ್ಯಾಗರಾಜ ಸ್ವಾಮಿಯವರ ಜೀವಿತದಲ್ಲಿನ ಆಶ್ಚರ್ಯ ವಿಷಯಗಳು

[ ನಿನ್ನೇ ಸಂಚಿಕೆಯಿಂದ ಮುಂದಕ್ಕೆ ]

ತಿರುಪತಿಯಿಂದ ಹಿಂತಿರುಗಿ ಬರುತ್ತಿರಲು ಕುಟುಂಬಸ್ಥನಾದ ಒಬ್ಬ ಬಡ ಭಿಕ್ಷುಕನು ಅವಘಡದಿಂದ ಭಾವಿಯಲ್ಲಿ ಬಿದ್ದು ಸತ್ತದ್ದನ್ನು ಕಂಡು ' ಶ್ರೀ ರಾಮ ಪಾದಮೂ ' ಎಂಬ ' ಅಮೃತ ವಾಹಿನಿ ' ರಾಗದ ಕೀರ್ತನೆಯನ್ನು ಹಾಡಿ, ಆತನನ್ನು ಪುನರುಜ್ಜೀವ ಮಾಡಿದನು. ತೆಲುಗು ವ ತಮಿಳುನಾಡಿನಲ್ಲಿ ಅವಘಡದಿಂದ ನರಳುತ್ತಿರುವ ಜನರು ಈಗಲೂ ತಮ್ಮ ರಕ್ಷಣೆಗಾಗಿ ಈ ಕೀರ್ತನೆಯನ್ನು ಅತಿ ಭಕ್ತಿಯಿಂದ ಹಾಡಿ ಶ್ರೀ ರಾಮನನ್ನು ಭಜಿಸುತ್ತಾರೆ. ಆಲ್ಲದೆ ಈ ' ಅಮೃತ ವಾಹಿನಿ ' ರಾಗಕ್ಕೆ ವ್ಯಕ್ತಪಟ್ಟವನನ್ನು ಪುನರ್ಜೀವನ ಮಾಡುವ ದಿವ್ಯ ಶಕ್ತಿ ಇರುವುದೆಂದು ಗ್ರಂಥಾಧಾರಂಗಳಿವೆ.

ಕೊಪ್ಪೂರ್ ಎಂಬ ಪಟ್ಟಣದ ಒಬ್ಬ ಶ್ರೀಮಂತನಲ್ಲಿ ಕೆಲವು ದಿನಸಿಗಳ ವಾಸವಾಡಿ ಹಿಂತಿರುಗಿ ಅರಣ್ಯಮಾರ್ಗವಾಗಿ ಪ್ರಯಾಣವನ್ನು ಬೆಳೆಸುತ್ತಿರುವಾಗ ತ್ಯಾಗರಾಜನ ಪಲ್ಲಕ್ಕಿಯನ್ನು ದರೋಡೆಕೋರರು ತಡೆದು ತ್ಯಾಗರಾಜನನ್ನು ಕೊಲೆಮಾಡುವ ಪ್ರಯತ್ನ ಮಾಡುತ್ತಿರಲು ' ರಘು-ವೀರ ರಣಧೀರ ' ಎಂಬ ಕೀರ್ತನೆಯನ್ನು ರಚಿಸಿ ಹಾಡಲು ಇಬ್ಬರು ದಿವ್ಯಪುರುಷರು ಬಂದು ಬಿಲ್ಲು ಬಾಣ ಗಳಿಂದ ದರೋಡೆಕೋರರನ್ನು ಓಡಿಸಿದರು. ಈ ದಿವ್ಯ ಪುರುಷರೇ ಶ್ರೀ ರಾಮ ಲಕ್ಷ್ಮಣರೆಂಬ ಭಾವನೆಯು ಭಕ್ತ ಜನರಲ್ಲಿದೆ.

ಹೀಗೆ ಅನೇಕ ಕೀರ್ತನೆಗಳನ್ನು ರಚಿಸಿ ಪರಮಾತ್ಮನ ಭಕ್ತಿಯಲ್ಲಿಯೇ ತೊಡಗಿದ್ದ ತ್ಯಾಗರಾಜನ ಕೀರ್ತನೆಗಳು ದೇಶದಲ್ಲೆಲ್ಲಾ ಹರಡಿ ತ್ಯಾಗರಾಜನು ಮಹಾ ಕೀರ್ತಿವಂತನಾದನು ; ಅನೇಕರು ಅತನ ಶಿಷ್ಯರಾಗಿ ಸಂಗೀತವನ್ನು ಕಲಿತು ಪ್ರಖ್ಯಾತರಾದರು.


ರಣಜಿತ್ ಜನಪ್ರಿಯ 2 ನೇ ವಾರ

ಸೀಜನಾ ಚಟರ್ಜಿ, ಪ್ರೇಂ ಅದೀಬ್, ಗೋಪ್, ಮನೋರಂಜನು ನಟಿಸಿರುವ ಮನೋಹರ ಸಂಗೀತ ನೃತ್ಯಗಳಿಂದ ಕೂಡಿದ ಸುಂದರ ಹಿಂದಿ ಚಿತ್ರ

a-Ka-Pyar ಮಾಕಪ್ಯಾರ್

ಪ್ರತಿ ದಿನ 3 ಆಟಗಳು



" ಗೋರಕ್ಷಣ "

ಕಾರ್ಯ ಎಲ್ಲೆಲ್ಲೂ ನಡೆಯಲಿ


Edited, Printed and Published by M. S. Krishna Rao. at the Satyavadi Press Chamrajpuram Mysore


ಉಡ್‌ಲಾಂಡ್ 29-6-51 ರಿಂದ

ಶಿ ಸು

— ಜಯಂತ್ ದೇಸಾಯ್‌ರವರ ಸಾಮಾಜಿಕ ಹಿಂದಿ ಚಿತ್ರ —

ರೇಣುಕ Renuka

ಪಾತ್ರ— ಮುಬಾರಕ್ ಮತ್ತು ಹೇಮಾವತಿ

ಪ್ರತಿ ದಿನ 3 ಪ್ರದರ್ಶನಗಳು

Gala Reopening

NEW OPERA TALKIES

From 28-6-51 :: Daily 3 Shows




LAST OF THE BUCCANEERS

Enchanting Technicolour Picture